ಇಲ್ಲ.....

ಅಧ್ಯಕ್ಷರು: ಒಬ್ಬರೇ ಮೂರು-ಮೂರು ಉಪಪ್ರಶ್ನೆಗಳನ್ನು ಕೇಳಿದರೆ ಹೇಗೆ? ಒಂದು ಪ್ರಶ್ನೆಯನ್ನು ಕೇಳುವ ಬದಲು ಮೂರು ಪ್ರಶ್ನೆಗಳನ್ನು ಕೇಳಿದರೆ ಎಷ್ಟು ಜನರಿಗೆ ನಾನು ಉತ್ತರ ಕೊಡಬೇಕು?

ಶ್ರೀ ಬಾಬುರಾವ್ ಚವ್ವಾಣ್ ಒಂದು ಗ್ರಾಮಪಂಚಾಯತಿಗೆ ಒಂದು ಗ್ರಂಥಾಲಯ ಕೊಡಬೇಕೆಂದು ಇದೆ. ಒಂದಕ್ಕಿಂತ ಹೆಚ್ಚು ಗ್ರಾಮಗಳಿಗೆ ಗ್ರಂಥಾಲಯ ಕೊಡತಕ್ಕಂಥ ವ್ಯವಸ್ಥೆ ನಮ್ಮಲ್ಲಿ ಇಲ್ಲ.

ಶ್ರೀ ಪಿ.ಕೃಷ್ಣಪ್ಪ: ಈ ಗ್ರಂಥಾಲಯಗಳಿಗೆ ಕಟ್ಟಡವನ್ನು ನೀವೇ ಒದಗಿಸುತ್ತೀರೋ ಅಥವಾ ಗ್ರಾಮಪಂಚಾಯ್ತಿಯವರು ಒದಗಿಸಬೇಕೋ?

ಶ್ರೀ ಬಾಬುರಾವ್ ಚವ್ವಾಣ್: ಶಾಸಕರ ನಿಧಿಯಿಂದ, ಲೋಕಸಭಾ ಸದಸ್ಯರ ನಿಧಿಯಿಂದ, ಗ್ರಾಮ ಪಂಚಾಯತಿಯಿಂದ ತಾವು ಕಟ್ಟಡ ಕಟ್ಟಿಸಿಕೊಟ್ಟರೆ ನಾವು ಗ್ರಂಥಾಲಯ ಮಂಜೂರು ಮಾಡಿಕೊಡುತ್ತೇವೆ. ಕಟ್ಟಡ ಕೊಟ್ಟು ಗ್ರಂಥಾಲಯ ಮಂಜೂರು ಮಾಡಿಕೊಡುವುದಕ್ಕೆ ನಮ್ಮಲ್ಲಿ ದುಡ್ಡು ಕಡಿಮೆ ಇದೆ. ಆದರೆ ತಮ್ಮ ನಿಧಿಯಿಂದ ಕಟ್ಟಡ ಮಾಡಿಕೊಟ್ಟರೆ ನಾವು ಗ್ರಂಥಾಲಯ ಮಂಜೂರು ಮಾಡುತ್ತೇವೆ.

ಶ್ರೀ ಪ್ರಕಾಶ್ ಖಂಡ್ರೆ: ಮಾನ್ಯ ಅಧ್ಯಕ್ಷರೇ, ನಾವು ನಮ್ಮ ಕ್ಷೇತ್ರಗಳ ಸಮಸ್ಯೆಗಳ ಬಗ್ಗೆ ಪ್ರಶ್ನೆ ರೂಪದಲ್ಲಿ ಇಲ್ಲಿ ಕೇಳಿದ್ದೇನೆ. ತಾವು ಸರಿಯಾದ ಉತ್ತರ ಕೊಡಿಸುತ್ತೇನೆ ಎಂದು ಆಶ್ವಾಸನೆ ಕೊಟ್ಟರೆ ನಾನು ಕೇಳುತ್ತೇನೆ.

ಅಧ್ಯಕ್ಷರು: ಮಾನ್ಯ ಮಂತ್ರಿಗಳಿಗೆ ಇದೇ ರೀತಿ ಉತ್ತರ ಕೊಡಬೇಕೆಂದು ನಾನು ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಪ್ರಕಾಶ್ ಖಂಡ್ರೆ: ಇದು ಇಬ್ಬರು ಮಂತ್ರಿಗಳಿಗೆ ಸಂಬಂಧಪಟ್ಟಂತೆ ಪ್ರಶ್ನೆ ಇದೆ. ಇವರು ಸರಿಯಾಗಿ ಉತ್ತರ ಕೊಡುತ್ತೇವೆ ಎಂದರೆ ನಾನು ಕೇಳುತ್ತೇನೆ.

ಅಧ್ಯಕ್ಷರು: ನೀವು ಮೊದಲು ಕೇಳಿ, ಆಮೇಲೆ ನೋಡೋಣ.

ಭಾಲ್ಕಿ ಪಟ್ಟಣದಲ್ಲಿ 100 ಹಾಸಿಗೆಗಳ ಆಸ್ಪತ್ರೆಯ ಕಟ್ಟಡದ ನಿರ್ಮಾಣದ ಬಗ್ಗೆ.

201(2417)

ಶ್ರೀ ಪ್ರಕಾಶ್ ಖಂಡ್ರೆ(ಬಾಲ್ಕಿ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಲ್ಕಿ ಪಟ್ಟಣದಲ್ಲಿ 100 ಹಾಸಿಗೆಗಳ ಆಸ್ಪತ್ರೆಯ ನಿರ್ಮಾಣದ ಸಲುವಾಗಿ ಬಂದಿರುವ ಪ್ರಸ್ತಾಪ ಯಾವ ಹಂತದಲ್ಲಿದೆ?

ಆ) ಈ ಆಸ್ಪತ್ರೆಯ ಕಟ್ಟಡ ಕಟ್ಟಲು ಬೇಕಾಗಿರುವ ಸ್ಥಳದ ಅಗತ್ಯವನ್ನು ಸರ್ಕಾರವು ಯಾವ ಮೂಲದಿಂದ ಪೂರೈಸಿಕೊಳ್ಳುತ್ತಿದೆ?

ಇ) ಆಸ್ಪತ್ರೆಯ ಕಟ್ಟಡಕ್ಕಾಗಿ ಈಗಾಗಲೇ ಹಸ್ತಾಂತರಗೊಳಿಸಲಿರುವ ಪ್ರಸಕ್ತ ಅಕ್ಕಮಹಾದೇವಿ ಮಹಿಳಾ ಪದವಿ ಪೂರ್ವ ಕಾಲೇಜು ನಡೆಯುತ್ತಿರುವ ಸ್ಥಳವನ್ನು ಇದುವರೆವಿಗೂ ಸರ್ಕಾರವು ಏಕೆ ಸ್ವಾಧೀನಕ್ಕೆ ಪಡೆದಿಲ್ಲ?

ಈ) ಸರ್ಕಾರವು ಈ ಸ್ಥಳವನ್ನು ವಶಪಡಿಸಿಕೊಳ್ಳುವ ಬಗ್ಗೆ ಇದುವರೆವಿಗೂ ತೆಗೆದುಕೊಂಡಿರುವ ಕ್ರಮಗಳೇನು?

ಡಾ: ಎ.ಬಿ.ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಬಾಲ್ಕಿಯಲ್ಲಿ ಹಾಲಿ ಇರುವ 30 ಹಾಸಿಗೆಗಳ ಆಸ್ಪತ್ರೆಯನ್ನು 100 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಅಭಿವೃದ್ಧಿ ಪಡಿಸುವ ಬಗ್ಗೆ ಅಂತಿಮ ನಕ್ಷೆ ಹಾಗೂ ಅಂದಾಜುಗಳನ್ನು ತಯಾರಿಸಲಾಗಿದೆ. ಈ ನಕ್ಷೆ ಹಾಗೂ ಅಂದಾಜುಗಳಿಗೆ ಜರ್ಮನಿಯ ಕೆ.ಎಫ್.ಡಬ್ಲ್ಯೂ ಸಂಸ್ಥೆಯಿಂದ ಅನುಮೋದನೆ ದೊರೆತ ತಕ್ಷಣ ಟೆಂಡರು ಕರೆದು ಕಾಮಗಾರಿ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಆ) ಬಾಲ್ಕಿ ಸರ್ಕಾರಿ ಪ್ರೌಢಶಾಲೆಗೆ ಸಂಬಂಧಿಸಿದ 4 ಎಕರೆ 32 ಗುಂಟೆ ಜಮೀನಿನಲ್ಲಿ 5904.72 ಚ.ಮೀ. ಜಮೀನನ್ನು 11-9-2000ದಂದು ಆರೋಗ್ಯ ಇಲಾಖೆಗೆ ಹಸ್ತಾಂತರಿಸಲಾಗಿದೆ. (ಶಾಂತಿವರ್ಧಕ ಶಿಕ್ಷಣ ಸಂಸ್ಥೆ ಬಾಲ್ಕಿ ಇವರು ಬಿಟ್ಟು ಕೊಡಲಿರುವ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಕಟ್ಟಡಗಳನ್ನು ಹಾಗೂ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಕಟ್ಟಡಗಳನ್ನು ಸಹ ಮೇಲಿನ ಉದ್ದೇಶಕ್ಕಾಗಿ ಉಪಯೋಗಿಸಲಾಗುವುದು) ಹಾಗೂ ಖಾಲಿ ಜಾಗದಲ್ಲಿ ಸರ್ಕಾರಿ ಆಸ್ಪತ್ರೆಯ ಕಟ್ಟಡವನ್ನು ಕಟ್ಟಲಾಗುವುದು.

ಇ) ಹಾಲಿ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಕ್ಕಮಹಾದೇವಿ ಮಹಿಳಾ ಪದವಿ ಪೂರ್ವ ಕಾಲೇಜನ್ನು ಸ್ಥಳಾಂತರಿಸಲು 1 1/2 ವರ್ಷ ಕಾಲಾವಧಿಯನ್ನು ಕಾಲೇಜು ನಡೆಸುತ್ತಿರುವ ಶಾಂತಿವರ್ಧಕ ಶಿಕ್ಷಣ ಸಂಸ್ಥೆಯು ಕೋರಿರುತ್ತದೆ.

ಈ) ಈ ಸ್ಥಳವನ್ನು ಆದಷ್ಟು ಬೇಗ ಸರ್ಕಾರಕ್ಕೆ ಬಿಟ್ಟು ಕೊಡಲು ಜಿಲ್ಲಾ ಆರೋಗ್ಯ ಅಧಿಕಾರಿಗಳು ಬೀದರ್‌ರವರು ಶಾಂತಿವರ್ಧಕ ಶಿಕ್ಷಣ ಸಂಸ್ಥೆಗೆ ಮೇಲಿಂದ ಮೇಲೆ ಒತ್ತಾಯಿಸಿ ಪತ್ರ ಬರೆಯುತ್ತಿದ್ದಾರೆ.

ಶ್ರೀ ಪ್ರಕಾಶ್ ಖಂಡ್ರೆ: ಪ್ರಶ್ನೆ 'ಇ'ಗೆ ಮಂತ್ರಿಗಳು ಏನು ಉತ್ತರ ಕೊಟ್ಟಿದ್ದಾರೆ ಎಂದರೆ ''ಹಾಲಿ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಕ್ಕಮಹಾದೇವಿ ಮಹಿಳಾ ಪದವಿ ಪೂರ್ವ ಕಾಲೇಜನ್ನು ಸ್ಥಳಾಂತರಿಸಲು ಒಂದೂವರೆ ವರ್ಷ ಕಾಲಾವಧಿಯನ್ನು ಕಾಲೇಜು ನಡೆಸುತ್ತಿರುವ ಶಾಂತಿವರ್ಧಕ ಸಂಸ್ಥೆಯವರು ಕೋರಿರುತ್ತಾರೆ'' ಎಂದು ಹೇಳಿದ್ದಾರೆ.

೧೧.೩೦ ಎ.ಎಂ.

ನೂರು ಹಾಸಿಗೆಗಳ ಆಸ್ಪತ್ರೆ ಕಟ್ಟುವ ಸಲುವಾಗಿ ಇರತಕ್ಕ ಈ ಸ್ಥಳ ಏನಿದೆ, ಇದನ್ನು ಶಿಕ್ಷಣ ಇಲಾಖೆಯಿಂದ ಆರೋಗ್ಯ ಇಲಾಖೆಗೆ ಈಗಾಗಲೇ ಸ್ಥಳಾಂತರವಾಗಿದೆ. ಸ್ವಲ್ಪ ಕ್ರಮ ತೆಗೆದುಕೊಂಡಿದ್ದಾರೆ. ಈ ಎಜುಕೇಷನ್ ಸೊಸೈಟಿ ಅಧ್ಯಕ್ಷರಿಗೆ ಎರಡು ಸಾರಿ ಡಿ.ಹೆಚ್.ಒ. ಲೆಟರ್ ಕೊಟ್ಟಿದ್ದಾರೆ. ಅದಕ್ಕೆ ಅವರು ಇನ್ನೂ ಒಂದೂವರೆ ವರ್ಷ ಖಾಲಿ ಮಾಡುವುದಿಲ್ಲವೆಂದು ಲೆಟರ್ ಕೊಡುತ್ತಾರೆ. ಆದರೆ, ಸರ್ಕಾರ ಸದನದಲ್ಲಿ ಏನು ಉತ್ತರ ಕೊಟ್ಟಿದೆ ಎಂದರೆ, ಖಾಲಿ ಮಾಡುತ್ತಿದ್ದಾರೆ ಎಂದು ಹೇಳಿದ್ದಾರೆ. ಅವರು ಖಾಲಿ ಮಾಡುವುದು ಏನೂ ಇಲ್ಲ. ಅವರು ಒಂದೂವರೆ ವರ್ಷ ಜಾಗ ಕೇಳಿದ್ದಾರೆಂದು ಉತ್ತರ ಕೊಟ್ಟಿದ್ದಾರೆ. ಅವರು ಜಾಗ ಬಿಡುವುದೇ ಇಲ್ಲ. ಆಸ್ಪತ್ರೆ ಆಗತಕ್ಕ ಪ್ರಶ್ನೆಯೇ ಬರುವುದಿಲ್ಲ.

ಡಾ||.ಎ.ಬಿ.ಮಾಲಕರೆಡ್ಡಿ: ಸನ್ಮಾನ್ಯ ಅಧ್ಯಕ್ಷರೇ, ಈ ಕಾರಣಕ್ಕಾಗಿಯೇ ಆಸ್ಪತ್ರೆ ಕಟ್ಟಡ ನಿಂತಿಲ್ಲ. ಅದರ ಅಂದಾಜು ಪಟ್ಟಿ ತಯಾರಾಗಿ ನಕ್ಷೆ ಸಿದ್ಧಮಾಡಿ ಅದು ಕೆ.ಎಫ್.ಡಬ್ಲ್ಯೂ. ಸಂಸ್ಥೆ ಜರ್ಮನಿಗೆ ಮಂಜೂರಿಗಾಗಿ ಹೋಗಿದೆ. ಅಲ್ಲಿಂದ ಬಂದ ಮೇಲೆ ಅಲ್ಲಿರತಕ್ಕ ಒಂದೂವರೆ ಎಕರೆ ನಿವೇಶನದಲ್ಲಿ ಆಸ್ಪತ್ರೆ ಕಟ್ಟಡ ಕಟ್ಟುವುದಕ್ಕೆ ಏನೂ ತೊಂದರೆ ಇಲ್ಲ.

ಶ್ರೀ ಪ್ರಕಾಶ್ ಖಂಡ್ರೆ: ಅವರು ಯಾವಾಗ ಖಾಲಿ ಮಾಡುತ್ತಾರೆ ಎಂಬುದು ನಮಗೆ ಬೇಕು.

ಡಾ||.ಎ.ಬಿ.ಮಾಲಕರೆಡ್ಡಿ: ಅಲ್ಲಿ ಸಾಕಷ್ಟು ಸ್ಥಳಾವಕಾಶ ಇದೆ. ಅಲ್ಲಿ ಜೂನಿಯರ್ ಕಾಲೇಜು ಇದೆ ಮತ್ತು ಗವರ್ನಮೆಂಟ್ ಸ್ಕೂಲು ಕೂಡ ಇದೆ. ತಕ್ಷಣ ಖಾಲಿ ಮಾಡಿ ಎಂದರೆ ಹೇಗಾಗುತ್ತದೆ, ನಾವು ಅದನ್ನೂ ನೋಡಬೇಕಲ್ಲಾ. ಆ ಸ್ಕೂಲು ಮತ್ತು ಕಾಲೇಜು ನಡೆದರೂ ಕೂಡ, ಆಸ್ಪತ್ರೆ ಕಟ್ಟಡದ ಬಗ್ಗೆ ನಕ್ಷೆ ಏನು ತಯಾರು ಮಾಡಿದೆ,

ಅದಕ್ಕೆ ಏನೂ ಅಡ್ಡಿ ಬರುವುದಿಲ್ಲ ಆ ಕಟ್ಟಡ ತಯಾರಿ ನಡೆಯುತ್ತದೆ.

ಶ್ರೀ ಪ್ರಕಾಶ್ ಖಂಡ್ರೆ: ಈ ಕಾಲೇಜು ಏನಿದೆ, ಇದನ್ನು ಲೀಸ್ ಮೇಲೆ ನಡೆಸುತ್ತಾ ಇದ್ದಾರೆ. ಆದರೆ, ಇವತ್ತು ಕಾಲೇಜು ನಡೆಸಬೇಕಾದರೆ ಸ್ವಂತ ಕಟ್ಟಡಬೇಕು, ಸ್ವಂತ ಆಟದ ಮೈದಾನ ಬೇಕೆಂದು ನನ್ನ ಕ್ಷೇತ್ರದಲ್ಲಿಯೇ ರಮಾಬಾಯಿ ಅಂಬೇಡ್ಕರ್ ಕಾಲೇಜು ತಾವೇ ರದ್ದು ಮಾಡಿದ್ದೀರಿ. ಆದರೆ, ಈ ಕಾಲೇಜನ್ನು ಏಕೆ ರದ್ದು ಮಾಡಿಲ್ಲ, ಈ ಕಾಲೇಜು ಏಕೆ ನಡೆಸುತ್ತಾ ಇದ್ದೀರಿ. ಇದಕ್ಕೆ ನಮ್ಮ ಶಿಕ್ಷಣ ಮಂತ್ರಿಗಳು ಉತ್ತರ ಕೊಡಬೇಕಾಗಿದೆ.

ಡಾ|| ಎ.ಬಿ.ಮಾಲಕರೆಡ್ಡಿ: ಆಸ್ಪತ್ರೆ ಕಟ್ಟಡ ಕಟ್ಟುವುದಕ್ಕೆ ಏನೂ ಆತಂಕ ಬಂದಿಲ್ಲ.

ಶ್ರೀ ಪ್ರಕಾಶ್ ಖಂಡ್ರೆ: ಇಂತಹ ಒಳ್ಳೆಯ ಸ್ಥಳದಲ್ಲಿ ತಾವು ಈ ಎಜುಕೇಷನ್ ಸೊಸೈಟಿಗೆ ಕೊಟ್ಟಿರುವುದು ನನಗೆ ಸರಿ ಎನಿಸುತ್ತಾ ಇಲ್ಲ. ನನ್ನ ಕ್ಷೇತ್ರದಲ್ಲಿ ಆಸ್ಪತ್ರೆ ಇಲ್ಲ. ಎಷ್ಟೋ ಜನ ಮಹಿಳೆಯರಿಗೆ ಹೆರಿಗೆಗಳು ಆಗುತ್ತವೆ ಮತ್ತು ಎಷ್ಟೋ ಜನರಿಗೆ ಅಪಘಾತಗಳು ಆಗಿ ಅರ್ಧ ದಾರಿಯಲ್ಲೇ ಸತ್ತು ಹೋಗಿದ್ದಾರೆ. ಜೊತೆಗೆ ಪ್ರತಿ ಎಂಟು ದಿವಸಕ್ಕೊಂದು ಡೆಲಿವರಿ ಕೇಸ್ ಡೆತ್ ಆಗುತ್ತಾ ಇವೆ. ಇಂತಹ ವ್ಯವಸ್ಥೆಯಲ್ಲಿ ನೀವು ಆ ಎಜ್ಯುಕೇಷನ್ ಸೊಸೈಟಿ ಖಾಲಿ ಮಾಡಿಸಿ, ಆ ಸ್ಥಳವನ್ನು ನಿಮ್ಮ ವಶಕ್ಕೆ ತೆಗೆದುಕೊಂಡರೆ ಒಳ್ಳೆಯದಾಗುತ್ತದೆ. ಇಲ್ಲದೇ ಹೋದರೆ ಆಗುವುದಿಲ್ಲ.

ಡಾ|| ಎ.ಬಿ.ಮಾಲಕರೆಡ್ಡಿ: ಇನ್ನೂ ಆ ಕಟ್ಟಡ ಮಂಜೂರಾಗಿಯೇ ಬಂದಿಲ್ಲ. ನಾವು ಅಂದಾಜು ಪಟ್ಟಿ ಮತ್ತು ನಕ್ಷೆಯನ್ನು ಕಳುಹಿಸಿಕೊಟ್ಟಿದ್ದೇವೆ, ಅದು ಜರ್ಮನಿಯಿಂದ ಮಂಜೂರಾಗಿ ಬರಬೇಕು. ಅದು ಬಂದ ಮೇಲೆ ಆಸ್ಪತ್ರೆ ಕಟ್ಟುವುದಕ್ಕೆ ಯಾವುದೂ ಅಭ್ಯಂತರ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್: ನೀವು ಪ್ರೋಸಸ್ ಪ್ರಾರಂಭ ಮಾಡಿ. ಎಲ್ಲಾ ರೆಡಿಯಾಗಿ ಬರುವುದಕ್ಕೆ ಇನ್ನೂ 4-5 ವರ್ಷಗಳು ಬೇಕಾಗುತ್ತದೆ.

ಡಾ|| ಎ.ಬಿ.ಮಾಲಕರೆಡ್ಡಿ: ಇವತ್ತು ಮುಂಜಾನೆ ಮಾಜಿ ಶಾಸಕರಾದ ವಿಜಯ ಖಂಡ್ರೆಯವರನ್ನು ಕರೆಸಿ ನಾನು ಮಾತನಾಡಿದ್ದೇನೆ. ಇದಕ್ಕೇನೂ ಸಮಸ್ಯೆ ಇಲ್ಲ.

- ಗೊಂದಲ -

ಅಧ್ಯಕ್ಷರು: ಈ ರೀತಿ ಮಾತನಾಡುತ್ತಾ ಹೋದರೆ, ಉಳಿದ ಐದು ಪ್ರಶ್ನೆಗಳನ್ನೂ ಮುಂದಕ್ಕೆ ಹಾಕಬೇಕಾಗುತ್ತದೆ ಇಲ್ಲವೇ ಲ್ಯಾಪ್ಸ್ ಆಗುತ್ತವೆ. ಅವರು ಇವತ್ತು ಬೆಳಿಗ್ಗೆ ಮಾತನಾಡಿದ್ದೇವೆಂದು ಹೇಳಿದ ಮೇಲೆ ಪುನಃ ಏನು ಪ್ರಶ್ನೆ ಕೇಳುತ್ತೀರಿ. ಅವರು

ಆದಷ್ಟು ಬೇಗನೆ ಮಾಡುತ್ತೇವೆಂದು ಹೇಳಿದ್ದಾರೆ, ಈಗಲೇ ಮಾಡುವುದಕ್ಕಾಗುತ್ತದೆಯೇ? ಅವರಿಗೂ ಸ್ವಲ್ಪ ಸಮಯ ಬೇಡವೇ?

ಮಂಡ್ಯ ಜಿಲ್ಲಾ ಆಯುರ್ವೇದ ಆಸ್ಪತ್ರೆಗೆ ಸ್ವಂತ ಕಟ್ಟಡ ಒದಗಿಸುವುದು.

202(2296)

ಶ್ರೀ ಆತ್ಮಾನಂದ ಎಂ.ಎಸ್.(ಮಂಡ್ಯ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯದಲ್ಲಿ ಜಿಲ್ಲಾ ಆಯುರ್ವೇದ ಆಸ್ಪತ್ರೆ ಕಾರ್ಯ ನಿರ್ವಹಿಸುತ್ತಾ ಇದೆಯೆ?

ಆ) ಹಾಗಿದ್ದಲ್ಲಿ ಈ ಆಸ್ಪತ್ರೆಗೆ ಸೂಕ್ತ ಕಟ್ಟಡದ ಸೌಲಭ್ಯವಿಲ್ಲದಿರುವುದನ್ನು ಸರ್ಕಾರ ಗಮನಿಸಿದೆಯೇ?

ಇ) ಕಟ್ಟಡದ ಸೌಲಭ್ಯ ನೀಡಲು ಸರ್ಕಾರವು ಕ್ರಮ ಕೈಗೊಂಡಿದೆಯೇ?

ಡಾ: ಎ.ಬಿ.ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಹೌದು.

ಆ) ಜಿಲ್ಲಾ ಸರ್ಕಾರಿ ಆಯುರ್ವೇದ ಆಸ್ಪತ್ರೆಯು ಖಾಸಗಿಯ ಹಳೆಯ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ದಿನಾಂಕ:1-4-2001 ರಿಂದ ನೂತನವಾದ ಹಾಗೂ ಸೂಕ್ತವಾದ ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಇ) ಸದರಿ ಆಸ್ಪತ್ರೆಗೆ ಸ್ವಂತ ಕಟ್ಟಡ ಇಲ್ಲದ ಪ್ರಯುಕ್ತ ಇದನ್ನು ನಿರ್ಮಾಣ ಮಾಡಲು ಮಂಡ್ಯದ ಜಿಲ್ಲಾಧಿಕಾರಿಗಳು, ಮಂಡ್ಯ ಗ್ರಾಮದ ಸರ್ವೆ ನಂ.77 ರಲ್ಲಿರುವ 15 ಗುಂಟ ಜಮೀನನ್ನು ಮಂಜೂರು ಮಾಡಿರುತ್ತಾರೆ. ಆ ಜಮೀನಿನಲ್ಲಿ ಆಯುರ್ವೇದ ಆಸ್ಪತ್ರೆ ಕಟ್ಟಡ ಕಟ್ಟುವ ಬಗ್ಗೆ ಲೋಕೋಪಯೋಗಿ ಇಲಾಖೆಯ ರೂ.65-00 ಲಕ್ಷಗಳ ಅಂದಾಜು ಪಟ್ಟಿ ಮತ್ತು ನಕ್ಷೆಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಪ್ರಸಕ್ತ 2000-2001ನೇ ಸಾಲಿನಲ್ಲಿ ಈ ಕಾಮಗಾರಿಗೆ ಆಯವ್ಯಯ ಲಭ್ಯವಿಲ್ಲದೆ ಇರುವುದರಿಂದ ಹೆಚ್ಚುವರಿ ಅನುದಾನ ಬಿಡುಗಡೆ ಮಾಡುವ ಸಾಧ್ಯತೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಂ.ಎಸ್.ಆತ್ಮಾನಂದ: ಸನ್ಮಾನ್ಯ ಅಧ್ಯಕ್ಷರೇ, ಈ ಒಂದು ಜಿಲ್ಲಾ ಆಯುರ್ವೇದ